ಪರೀಕ್ಷಾ ತುರ್ತು

ಕರ್ನಾಟಕ ಸರ್ಕಾರ

ಸಂ:ಪಪೂಶಿಇ/ಪರೀಕ್ಷೆ/ನೋಂದಣಿ&ಫಲಿತಾಂಶ/ಮಾ-18/2017-18.

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಕ್ರಾಸ್,
ಮಲ್ಲೇಶ್ವರಂ, ಬೆಂಗಳೂರು-1
ದಿನಾಂಕ:14 -05-2018.

## ಸು ತ್ತೋ ಲೆ

ವಿಷಯ: 2018ರ ಜೂನ್‌ನಲ್ಲಿ ನಡೆಸುವ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ ಪುನರಾವರ್ತಿತ (Repeater) ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಸಂದಾಯ ಮಾಡಿ OMR ನಮೂನೆಯಲ್ಲಿ ಅರ್ಜಿ ಸಲ್ಲಿಸುವ ಬಗ್ಗೆ.

ಉಲ್ಲೇಖ: 1. ಕಛೇರಿಯ ಸುತ್ತೋಲೆ ಸಂಖ್ಯೆ ಪಪೂಶಿಇ/ಪರೀಕ್ಷೆ/ನೋ&ಫ/2017-18. ದಿನಾಂಕ:30.04.2018 (ಪರೀಕ್ಷಾ ಶುಲ್ಕ ಪಾವತಿಸುವ ಬಗ್ಗೆ)

2. ಕಛೇರಿಯ ಸುತ್ತೋಲೆ ಸಂಖ್ಯೆ ಪಪೂಶಿಇ/ಪರೀಕ್ಷೆ/ನೋ&ಫ/2018-19. ದಿನಾಂಕ:10.05.2018 (ಫಲಿತಾಂಶ ತಿರಸ್ಕರಣೆ ಬಗ್ಗೆ)

* * * * *

1. **OMR ಅರ್ಜಿ ನಮೂನೆ ಹೊಂದಿದ ಅನುತ್ತೀರ್ಣ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ತೆಗೆದುಕೊಳ್ಳುವ ಬಗ್ಗೆ.**

1. ಹಿಂದಿನ ವರ್ಷಗಳಲ್ಲಿ ನಡೆಸಿದ ಕೆಲವು ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ OMR ನಮೂನೆಯಲ್ಲಿ ಅನುತ್ತೀರ್ಣ ಪ್ರಮಾಣ ಪತ್ರ ಮತ್ತು ಪರೀಕ್ಷಾ ಅರ್ಜಿಗಳನ್ನು (Marks Card cum Application) ಮುದ್ರಿಸಿ ಈ ಮೊದಲೇ ಕಳುಹಿಸಿಕೊಡಲಾಗಿದೆ. ಅಂತೆಯೇ ಈ ಸುತ್ತೋಲೆಯೊಂದಿಗೆ 2018ರ ಮಾರ್ಚ್‌ನಲ್ಲಿ ನಡೆಸಿದ ವಾರ್ಷಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳ OMR ಅಂಕಪಟ್ಟಿ ಮತ್ತು ಪರೀಕ್ಷಾ ಅರ್ಜಿಗಳನ್ನು OMR (Marks Card cum Application) ಮುದ್ರಿಸಿ ಕಳುಹಿಸಿಕೊಡಲಾಗಿದೆ. ಈ OMR ನಮೂನೆಗಳನ್ನು ಸ್ಕ್ಯಾನಿಂಗ್ ಮಾಡಲಾಗುತ್ತದೆ. ಆದುದರಿಂದ ಶುಲ್ಕ ಪಾವತಿಸಿದ ಅನುತ್ತೀರ್ಣ ಅಭ್ಯರ್ಥಿಗಳ OMR ಅಂಕಪಟ್ಟಿಗಳಲ್ಲಿನ ವಿವರಗಳನ್ನು ಎಚ್ಚರಿಕೆಯಿಂದ ಭರ್ತಿ ಮಾಡಿ ಶೇಡಿಂಗ್ ಮಾಡುವುದು.
2. ಪರೀಕ್ಷಾ ಶುಲ್ಕ ಕಟ್ಟಿಸಿಕೊಂಡು OMR ಅನುತ್ತೀರ್ಣ ಅಂಕಪಟ್ಟಿಗಳಲ್ಲಿ ಅಭ್ಯರ್ಥಿಗಳಿಂದ ಸಹಿಯನ್ನು ಪಡೆದುಕೊಳ್ಳುವುದು. OMR ಅಂಕಪಟ್ಟಿಗಳಲ್ಲಿನ ಉಳಿದ ಮಾಹಿತಿಗಳನ್ನು ಕಾಲೇಜಿನ ಪ್ರಾಂಶುಪಾಲರು / ಸಿಬ್ಬಂದಿಯವರು ಭರ್ತಿ ಮಾಡಿ ಶೇಡಿಂಗ್ ಮಾಡುವುದು.
3. ಅನುತ್ತೀರ್ಣ OMR ಅಂಕಪಟ್ಟಿಗಳಲ್ಲಿ ಭಾವಚಿತ್ರ ಮುದ್ರಿತವಾಗಿದ್ದಾಗ್ಯೂ ಸಹ ನಿಗದಿತ ಅಂಕಣದಲ್ಲಿ ಅಭ್ಯರ್ಥಿಗಳ ಇತ್ತೀಚಿನ ಪಾಸ್‌ಪೋರ್ಟ್ ಸೈಜಿನ ನೈಜ ಭಾವಚಿತ್ರವನ್ನು ಕಡ್ಡಾಯವಾಗಿ ಅಂಟಿಸುವುದು. **ಭಾವಚಿತ್ರದ ಮೇಲೆ ಪ್ರಾಂಶುಪಾಲರು ಸಹಿ ಮಾಡಬಾರದು.**
4. OMR ಅಂಕಪಟ್ಟಿ ಆಧಾರದ ಮೇಲೆ ಪರೀಕ್ಷಾ ಶುಲ್ಕ ಕಟ್ಟಿದ ಹಳೆ ಪಠ್ಯ ಕ್ರಮ ಹಾಗು ಹೊಸ ಪಠ್ಯ ಕ್ರಮದ ಎಲ್ಲಾ ಪುನರಾವರ್ತಿತ ಅಭ್ಯರ್ಥಿಗಳಿಗೆ ಅರ್ಜಿ ಕ್ರಮ ಸಂಖ್ಯೆ (Application Serial Number ) ಕಾಲಂನಲ್ಲಿ 1001 ರಿಂದ ಪ್ರಾರಂಭಿಸಿ ಸಂಖ್ಯೆಗಳನ್ನು ನೀಡಿ ಮುಂದುವರಿಸಿ ಸಂಖ್ಯೆಗಳಿಗನುಗುಣವಾಗಿ ಶೇಡಿಂಗ್ ಮಾಡಬೇಕು.
5. PCMB (ಪಿ.ಸಿ.ಎಂ.ಬಿ) ಹೊರತುಪಡಿಸಿ ಉಳಿದ ಎಲ್ಲಾ ವಿಷಯಗಳಿಗೆ ಹಳೆ ಪಠ್ಯಕ್ರಮದಲ್ಲಿ(OS) ಪರೀಕ್ಷೆ ತೆಗೆದುಕೊಳ್ಳಲು ಜೂನ್ 2018 ರ ಪೂರಕ ಪರೀಕ್ಷೆ ಕೊನೆಯ ಅವಕಾಶವಾಗಿರುತ್ತದೆ.
6. ಶುಲ್ಕ ಪಾವತಿಸಿದ ಅಭ್ಯರ್ಥಿಗಳ OMR ಅಂಕಪಟ್ಟಿಗಳನ್ನು ಟ್ಯಾಗ್ ಅಥವಾ ಪಿನ್ ಮಾಡದೆ ಅರ್ಜಿಗಳನ್ನು ಪಾಲಿಥಿನ್ ಕವರಿನಲ್ಲಿರಿಸಬೇಕು.

7. ಅಭ್ಯರ್ಥಿಗಳ ಮಾಹಿತಿಯನ್ನು OMR ಅಂಕಪಟ್ಟಿಗಳಲ್ಲಿ ಭರ್ತಿ ಮಾಡಿ ಶೇಡಿಂಗ್ ಮಾಡುವಲ್ಲಿ ಎಚ್ಚರ ವಹಿಸುವುದು.

2. **ಹಿಂದಿನ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿ OMR ಅಂಕಪಟ್ಟಿ ನಮೂನೆ ಇಲ್ಲದ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಪಡೆಯುವ ಬಗ್ಗೆ :**

ಹಿಂದಿನ ವರ್ಷಗಳ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ MCAಗಳನ್ನು ಮುದ್ರಿಸಿ ಕಳುಹಿಸಿಕೊಡಲಾಗಿತ್ತು. ಅಂತಹ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸುವಾಗ MCAಗಳನ್ನು ಬಳಸಿಕೊಳ್ಳುವುದು. ಜೆರಾಕ್ಸ್ ಮಾಡಿದ, ಟೈಪ್ ಮಾಡಿದ ಅಥವಾ ಕೈಬರಹದ ಪರೀಕ್ಷಾ ಅರ್ಜಿ ಆಧಾರದ ಮೇಲೆ ಶುಲ್ಕಗಳನ್ನು ಕಟ್ಟಿಸಿ ಕೊಳ್ಳಬಾರದು.

ಇಲಾಖೆಯಿಂದ ಅಧಿಕೃತವಾಗಿ ಮುದ್ರಿಸಿದ ಇಲ್ಲವೆ ದ್ವಿಪ್ರತಿ ನೀಡಿರುವಂತಹ ಅರ್ಜಿಗಳ ಆಧಾರದ ಮೇಲೆ ಮಾತ್ರ ಶುಲ್ಕ ಕಟ್ಟಿಸಿ ಕೊಳ್ಳುವುದು. MCAಗಳಲ್ಲಿ ವಿದ್ಯಾರ್ಥಿಗಳ ಭಾವಚಿತ್ರ ಮುದ್ರಿತವಾಗದಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಂದ ಮೂರು ಭಾವಚಿತ್ರಗಳನ್ನು ಪಡೆದು ಕಾಲೇಜುಗಳಲ್ಲಿ ಕಾಯ್ದಿರಿಸಿಕೊಳ್ಳುವುದು.

ಇಂತಹ ವಿದ್ಯಾರ್ಥಿಗಳ ಅರ್ಜಿಗಳಿಗೆ ಅರ್ಜಿ ಕ್ರಮ ಸಂಖ್ಯೆಯ (Application Serial Number) ಕಾಲಂನಲ್ಲಿ 3001 ರಿಂದ ನೀಡಿ ಪ್ರತ್ಯೇಕ ಬಂಚ್ ಮಾಡಿ ಲಕೋಟೆಯಲ್ಲಿರಿಸುವುದು.

3. **2018ರ ಜೂನ್‌ನಲ್ಲಿ ನಡೆಯುವ ದ್ವಿತೀಯ ಪಿಯುಸಿ ಪುನರಾವರ್ತಿತ (ರಿಪೀಟರ್) ಅಭ್ಯರ್ಥಿಗಳಿಂದ ಪೂರಕ ಪರೀಕ್ಷೆಗೆ ಶುಲ್ಕ ಸಂದಾಯ ಮಾಡಲು ಕೆಳಕಂಡಂತೆ ದಿನಾಂಕಗಳನ್ನು ನಿಗದಿಗೊಳಿಸಿದೆ.**

| ಕ್ರಮ ಸಂಖ್ಯೆ | ಅರ್ಜಿಗಳ ವಿವರ | ಅಭ್ಯರ್ಥಿಗಳು ಕಾಲೇಜಿಗೆ ಶುಲ್ಕ ಪಾವತಿಸಲು ಕಡೇ ದಿನಾಂಕ | ಕಾಲೇಜಿನವರು ಪರೀಕ್ಷಾ ಶುಲ್ಕವನ್ನು ಖಜಾನೆಗೆ ಸಂದಾಯ ಮಾಡುವ ದಿನಾಂಕ | ಕಾಲೇಜಿನವರು ಅರ್ಜಿಗಳನ್ನು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವ ದಿನಾಂಕ |
|---|---|---|---|---|
| 1. | ದಂಡ ಶುಲ್ಕವಿಲ್ಲದೆ | 15.05.2018 | 16.05.2018 | 17.05.2018 |

4. **ಉತ್ತೀರ್ಣ ಹಾಗೂ ಅನುತ್ತೀರ್ಣ ವಿದ್ಯಾರ್ಥಿಗಳು ಫಲಿತಾಂಶ ತಿರಸ್ಕರಿಸಲು ಕೊನೆಯ ದಿನಾಂಕ :**

ಉತ್ತೀರ್ಣ ಹಾಗೂ ಅನುತ್ತೀರ್ಣ ವಿದ್ಯಾರ್ಥಿಗಳು ಯಾವುದಾದರೂ ವಿಷಯದಲ್ಲಿ/ಗಳಲ್ಲಿ ಫಲಿತಾಂಶ ತಿರಸ್ಕರಿಸಿ, ಪುನಃ ಪರೀಕ್ಷೆ ಬರೆಯಲು ಇಚ್ಛಿಸಿದಲ್ಲಿ ನಿಯಮಾನುಸಾರ ಅವಕಾಶವಿರುತ್ತದೆ.

ಉತ್ತೀರ್ಣ ವಿದ್ಯಾರ್ಥಿಗಳು ಫಲಿತಾಂಶ ತಿರಸ್ಕರಣೆ ಮಾಡುವ ಸಂದರ್ಭದಲ್ಲಿ ಅರ್ಜಿ ನಮೂನೆಯಲ್ಲಿ ತಿಳಿಸಿರುವಂತೆ ರೂ.20/- ಛಾಪಾ ಕಾಗದದಲ್ಲಿ ನೋಟರಿ ಮುಂದೆ ಘೋಷಣೆ ಮಾಡಿದ ಮೂಲ ಪತ್ರವನ್ನು ಕಡ್ಡಾಯವಾಗಿ ನೀಡತಕ್ಕದ್ದು.

ಇಂತಹ ವಿದ್ಯಾರ್ಥಿಗಳು ಪ್ರಾಂಶುಪಾಲರ ಮುಖಾಂತರ ಕೇಂದ್ರ ಕಛೇರಿಗೆ ಅರ್ಜಿ ಸಲ್ಲಿಸಿ ದಿ:15.05.2018 ರೊಳಗೆ ಫಲಿತಾಂಶ ತಿರಸ್ಕರಣೆಗೆ ಅನುಮತಿ ಪಡೆದು ದಂಡ ಶುಲ್ಕವಿಲ್ಲದೆ ಪರೀಕ್ಷಾ ಶುಲ್ಕ ಪಾವತಿಸಲು ಅವಕಾಶ ನೀಡಿದೆ. ಶುಲ್ಕ ಪಾವತಿಸಿದ ನಂತರ ಮೂಲ ಅಂಕಪಟ್ಟಿಗಳನ್ನು / ತಾತ್ಕಾಲಿಕ ಅಂಕಪಟ್ಟಿಯನ್ನು ಪ್ರಾಂಶುಪಾಲರು ಖುದ್ದಾಗಿ ಪರಿಶೀಲಿಸಿ ದೃಢೀಕರಿಸಿ ಇತರೆ ಪರೀಕ್ಷಾ ಅರ್ಜಿಗಳೊಂದಿಗೆ ಕಳುಹಿಸಿಕೊಡಬೇಕು.

**"ಫಲಿತಾಂಶ ತಿರಸ್ಕರಣೆಗೆ ಅನುಮತಿಯನ್ನು ಪ್ರಾಂಶುಪಾಲರ ಮುಖಾಂತರ ಕೇಂದ್ರ ಕಛೇರಿಯಿಂದ ಕಡ್ಡಾಯವಾಗಿ ಪಡೆದುಕೊಳ್ಳಬೇಕು"**

**ಫಲಿತಾಂಶ ತಿರಸ್ಕರಣೆಯಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ:**

ಫಲಿತಾಂಶ ತಿರಸ್ಕರಿಸಲು ಕಳುಹಿಸುವಾಗ 30 ರಿಂದ 34 ಅಂಕಗಳು ದೊರೆತು ಉತ್ತೀರ್ಣಗೊಂಡಿರುವ ವಿಷಯಗಳ ಫಲಿತಾಂಶವನ್ನು ಸಹ ಕಡ್ಡಾಯವಾಗಿ ತಿರಸ್ಕರಿಸಬೇಕು. ಈ ನಿಯಮ ಭಾಗ-1 ಮತ್ತು ಭಾಗ-2ಕ್ಕೆ ಪ್ರತ್ಯೇಕವಾಗಿ ಅನ್ವಯಿಸುತ್ತದೆ.

5. <u>ಉತ್ತೀರ್ಣ ಹಾಗೂ ಅನುತ್ತೀರ್ಣ ವಿದ್ಯಾರ್ಥಿಗಳು ಫಲಿತಾಂಶ ತಿರಸ್ಕರಿಸುವ ಅರ್ಜಿಗಳಿಗೆ ಅರ್ಜಿ ಸಂಖ್ಯೆ ನೀಡುವ ಬಗ್ಗೆ:</u>

1. ಫಲಿತಾಂಶ ತಿರಸ್ಕರಣೆಗೆ ಅನುಮತಿ ನೀಡಿದ ಅನುತ್ತೀರ್ಣ **OMR** ಅಂಕಪಟ್ಟಿ–ವ–ಅರ್ಜಿಗಳಿಗೆ 1001 ರಿಂದ ಕ್ರಮ ಸಂಖ್ಯೆಯನ್ನು ನೀಡುವ ಪುನರಾವರ್ತಿತ ಅರ್ಜಿಗಳೊಂದಿಗೆ ಸೇರಿಸಿ ಸಂಖ್ಯೆಯನ್ನು ನೀಡಬೇಕು.
2. ಉತ್ತೀರ್ಣ ವಿದ್ಯಾರ್ಥಿಗಳು ಫಲಿತಾಂಶ ತಿರಸ್ಕರಣೆಗೆ ಅನುಮತಿ ಪಡೆದು ಶುಲ್ಕ ಕಟ್ಟಿದ ವಿದ್ಯಾರ್ಥಿಗಳ ಮೂಲ ಉತ್ತೀರ್ಣ ಪ್ರಮಾಣ ಪತ್ರಗಳಿಗೆ ಅರ್ಜಿ ಕ್ರಮ ಸಂಖ್ಯೆ 4001 ರಿಂದ ಪ್ರಾರಂಭಿಸಿ ಪ್ರತ್ಯೇಕ ಬಂಚ್ ಮಾಡಬೇಕು.

7.<u>ಅರ್ಜಿಗಳನ್ನು ವಿದ್ಯಾರ್ಥಿ ಪಟ್ಟಿಯೊಂದಿಗೆ **(FEE STATEMENT)** ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವ ಬಗ್ಗೆ :</u>

ಪರೀಕ್ಷಾ ಶುಲ್ಕ ಕಟ್ಟಿದ 1001, 3001 ಹಾಗೂ 4001ರ ಕ್ರಮಗಳನ್ನು ನೀಡಿದ ವಿದ್ಯಾರ್ಥಿಗಳ ಅರ್ಜಿಗಳು ಮತ್ತು ಶುಲ್ಕದ ಮಾಹಿತಿ **(FEE STATEMENT)** ಗಳನ್ನು ಕೆಳಗೆ ತಿಳಿಸಿರುವ ನಮೂನೆಯಂತೆ ತಯಾರಿಸಿ ಇದರೊಂದಿಗೆ ಮೂಲ ಚಲನ್‌ನನ್ನು ಒಂದೇ ಲಕೋಟೆಯಲ್ಲಿರಿಸುವುದು. ಲಕೋಟೆಯ ಮೇಲೆ ಕಾಲೇಜಿನ ಸಂಕೇತ ಸಂಖ್ಯೆ, ವಿಳಾಸದ ಜೊತೆಗೆ "ಪುನರಾವರ್ತಿತ ಅರ್ಜಿಗಳು" **(REPEATERS' APPLICATIONS)** ಎಂದು ಬರೆದು <u>**ದಿನಾಂಕ 17.05.2018ರಂದು ಒಂದೇ ಕಂತಿನಲ್ಲಿ**</u> ಪರೀಕ್ಷಾ ಅರ್ಜಿಗಳನ್ನು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ತಲುಪಿಸುವುದು. <u>**ದಿನಾಂಕ 19.05.2018**</u>ರಂದು ಜಿಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲೆಯಲ್ಲಿರುವ ಎಲ್ಲಾ ಕಾಲೇಜುಗಳ ಅರ್ಜಿಗಳನ್ನು ಒಟ್ಟಾರೆಯಾಗಿ <u>ಒಂದೇ ಕಂತಿನಲ್ಲಿ ಕೇಂದ್ರಕಛೇರಿಗೆ ಖುದ್ದಾಗಿ ಸಲ್ಲಿಸುವುದು.</u>

<u>**ಪುನರಾವರ್ತಿತ ಅರ್ಜಿ ಮತ್ತು ಪರೀಕ್ಷಾ ಶುಲ್ಕ ವಿವರಗಳ ನಮೂನೆ (Repeaters' Fee Statement)**</u>

| ಅರ್ಜಿ ಸಂಖ್ಯೆ | ವಿದ್ಯಾರ್ಥಿಯ ಹೆಸರು | ಕಳೆದ ಬಾರಿ ಪರೀಕ್ಷೆ ತೆಗೆದುಕೊಂಡ ನೋಂದಣಿ ಸಂಖ್ಯೆ, ವರ್ಷ ಮತ್ತು ತಿಂಗಳು | ಪರೀಕ್ಷಾ ಶುಲ್ಕ ಸಂದಾಯ ಮಾಡಿದ ವಿಷಯಗಳ ವಿವರ ಮತ್ತು ವಿಷಯ ಸಂಕೇತ ಸಂಖ್ಯೆ | | | | | | ಪರೀಕ್ಷಾ ಶುಲ್ಕ ಪಾವತಿಸಿದ ವಿವರ | | | | |
|---|---|---|---|---|---|---|---|---|---|---|---|---|---|
| | | | | | | | | | ಶುಲ್ಕ ಪಡೆದ ದಿನಾಂಕ | ಅಂಕಪಟ್ಟಿ ಶುಲ್ಕ ₹. | ಪರೀಕ್ಷಾ ಶುಲ್ಕ | ಮೊತ್ತ ₹. | ಚಲನ್ ಸಂಖ್ಯೆ ಮತ್ತು ದಿನಾಂಕ |
| 1 | 2 | 3 | 4 | | | | | | 5 | 6 | 7 | 9 | 10 |
| | | | | | | | | | | | | | |
| | | | | | | | | | | | | | |

ವಿಶೇಷ ಸೂಚನೆ:

1. PCMB (ಪಿ.ಸಿ.ಎಂ.ಬಿ) ಹೊರತುಪಡಿಸಿ ಉಳಿದ ಎಲ್ಲಾ ವಿಷಯಗಳಿಗೆ ಹಳೆ ಪಠ್ಯಕ್ರಮದಲ್ಲಿ(OS) ಪರೀಕ್ಷೆ ತೆಗೆದುಕೊಳ್ಳಲು ಜೂನ್ 2018 ರ ಪೂರಕ ಪರೀಕ್ಷೆ ಕೊನೆಯ ಅವಕಾಶವಾಗಿರುತ್ತದೆ.
2. ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕವನ್ನು ವಿಸ್ತರಿಸಲಾಗುವುದಿಲ್ಲ.
3. <u>**ದಿನಾಂಕ:19.05.2018**</u> ರ ನಂತರ ಬರುವ ಯಾವುದೆ ಅರ್ಜಿಗಳನ್ನು ಕೇಂದ್ರಕಛೇರಿಯಲ್ಲಿ ಸ್ವೀಕರಿಸುವುದಿಲ್ಲ.
4. ಶೇಡಿಂಗ್ ಮಾಡುವಲ್ಲಿ ಆಗುವ ಪ್ರತಿ ತಪ್ಪಿಗೆ ರೂ.1000.00 ದಂಡ ವಿಧಿಸಲಾಗುವುದು.
5. ಈ ಸುತ್ತೋಲೆಯಂತೆ ಜಿಲ್ಲಾ ಉಪನಿರ್ದೇಶಕರು ಸೂಕ್ತ ಕ್ರಮ ತೆಗೆದುಕೊಂಡು **ದಿನಾಂಕ:19.05.2018** ರಂದು ಎಲ್ಲಾ ಪರೀಕ್ಷಾ ಅರ್ಜಿಗಳನ್ನು ಕೇಂದ್ರ ಕಛೇರಿಗೆ ತುರ್ತಾಗಿ ಸಲ್ಲಿಸುವಂತೆ ಸೂಚಿಸಿದೆ.

14/5/18

ನಿರ್ದೇಶಕರ ಪರವಾಗಿ,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಯನ್ನು:

1. ಜಿಲ್ಲಾ ಉಪನಿರ್ದೇಶಕರಿಗೆ.
2. ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ.
3. ಸಹಾಯಕ ನಿರ್ದೇಶಕರು, ಇ–ಆಡಳಿತ ಶಾಖೆ, ಪಪೂಶಿಇ. (ಅಂತರ್ ಜಾಲದಲ್ಲಿ ಪ್ರಕಟಿಸಲು).
4. ಹೆಚ್ಚುವರಿ ಕಛೇರಿ ಪ್ರತಿ.